Sri C. J. MUCKANNAPPA.—He has not given a proper reply to me. What action have the Government taken? I must congratulate the Hon'ble Minister for Industries about the action regarding stainless steel. I want to know what action he will take with regard to this copper in gots business.

Mr. SPEAKER.—We will wait and see.

Grant-in-aid to privately managed High Schools.

*Q.—491. Sri N. NANJE GOWDA (Krishnarajpet).—

Will the Government be pleased to state :—

(*a*) the date on which they issued orders asking the panchayats not to provide grant-in-aid to the privately managed high schools in the State;

(*b*) whether it has come to their notice that due to the above order it has become difficult to run the private high schools and that the villagers are greatly inconvenienced in the matter of education ?

A.—Sri S. R. KANTHI (Minister for Education).—

(*a*) No such order was issued.

(*b*) Does not arise.

ಶ್ರೀ ಎನ್. ನಂಜೇಗೌಡ.— ಪ್ರೌಢಶಾಲೆಗಳಿಗೆ ಪಂಚಾಯಿತಿಯಿಂದ ಸಹಾಯ ಧನವನ್ನು ಕೊಡುವ ವಿಚಾರದಲ್ಲಿ ನಾನು ಕೇಳಿದ್ದೇನೆ. ಇದು ಮಾನ್ಯ ವಿದ್ಯಾಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆಯೇ ಸ್ವಾಮಿ ?

†ಶ್ರೀ ಎಸ್. ಆರ್. ಕಂಠಿ.—ಪ್ರೌಢಶಾಲೆ ಎಂದರೆ ನನಗೆ ಸಂಬಂಧಪಟ್ಟದ್ದು. ಮಾನ್ಯ ಸದಸ್ಯರು ಉಪಪ್ರಶ್ನೆಗಳನ್ನು ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಎನ್. ನಂಜೇಗೌಡ.—ಏನು ಆಜ್ಞೆಗಳು ಹೊರಟಿಲ್ಲ ಎಂದು ಹೇಳಿದ್ದಾರೆ. ಪಂಚಾಯಿತಿಗಳಿಂದ ಖರ್ಚು ಹಾಕಿ ಪ್ರೌಢಶಾಲೆಗಳಿಗೆ ಹಣ ಕೊಡಕೂಡದೆಂದು ಸರ್ಕಾರದವರು ಆಜ್ಞೆ ಹೊರಡಿಸಿರುವುದು ನಿಜವಲ್ಲವೇ ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಹಾಗೇನೂ ಆಜ್ಞೆ ಹೊರಟಿಲ್ಲ.

ಶ್ರೀ ಎನ್. ನಂಜೇಗೌಡ.—ಅಭಿವೃದ್ಧಿ ಶಾಖೆಯಿಂದ ಖಾಸಗಿ ಶಾಲೆಗಳಿಗೆ ಯಾವ ಸಹಾಯ ಧನವನ್ನೂ ಒದಗಿಸಕೂಡದು ಎಂದು ಸರ್ಕುಲರ್ ಕಳಿಸಿದ್ದಾರೆ. ಅದನ್ನು ತಂದು ತೋರಿಸಿದರೆ ಅದನ್ನು ಪಾಪಸು ತೆಗೆದುಕೊಳ್ಳುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಅಭಿವೃದಿ ಶಾಖೆಯಿಂದ ನನ್ನ ಕತೆಗೆ ಬಂದಿರುವ ಸಮಾಚಾರದಲ್ಲಿ ಅಂಥ ಆಜ್ಞೆ ಏನೂ ಹೊರಟಿಲ್ಲ ಎಂದು ತಿಳಿಸಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪ್ರಶ್ನೆ ಸ್ಥಳೀಯ ಸಂಸ್ಥೆ ಸಚಿವರಿಗೆ ಸಂಬಂಧಪಟ್ಟಿರುವುದರಿಂದ ಮಾನ್ಯ ವಿದ್ಯಾ ಮಂತ್ರಿಯವರು ಅವರಿಂದ ಬೇಕಾದ ಮಾಹಿತಿಯನ್ನು ತೆಗೆದುಕೊಂಡು ಉತ್ತರ ಕೊಡಬೇಕಲ್ಲವೇ ಸ್ವಾಮಿ ?

ಅಧ್ಯಕ್ಷರು. ಮಾನ್ಯ ಸದಸ್ಯರು ಮಂತ್ರಿಗಳು ಕೊಟ್ಟ ಉತ್ತರವನ್ನು ತಾಪು ಸರಿಯಾಗಿ ಕೇಳಲಿಲ್ಲ ಎಂದು ಕಾಣುತ್ತದೆ.

ಶ್ರೀ ಎನ್. ನಂಜೇಗೌಡ —ಅಭಿವೃದ್ಧಿ ಶಾಖೆಯಿಂದ ಹೊರಟಿರುವ ಸರ್ಕುಲರನ್ನು ಮಂತ್ರಿಗಳಿಗೆ ಕೊಟ್ಟರೆ ಅದನ್ನು ಪಾಪಸು ತೆಗೆದುಕೊಳ್ಳುತ್ತಾರೆಯೇ ಸ್ವಾಮಿ ?

---

†Indicates that the remarks or speeches have not been revised by the member concerned

Mr. SPEAKER.—It is hypothetical.

ಶ್ರೀ ಟಿ. ಮಾದಯ್ಯ ಗೌಡ.—ಖಾಸಗಿ ಪ್ರೌಢ ಶಾಲೆಗಳಿಗೆ ಪಂಚಾಯಿತಿಗಳವರು ಸಹಾಯ ದ್ರವ್ಯ ಕೊಡುವುದರಲ್ಲಿ ಸರ್ಕಾರದ ಅಭಿಮತ ಏನು ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಅಭಿಮತದ ಪ್ರಶ್ನೆಯಲ್ಲ. ಕಾನೂನಿನ ಪ್ರಶ್ನೆ ಇದೆ.

Sri SANJEEVANATH AIKALA.—Is it a fact that the high schools run by the taluk board are denied the grant-in-aid for furniture .....

Mr. SPEAKER.—How does it arise ? This question pertains to Panchayats.

Sri SANJEEVANATH AIKALA.—Taluk Boards is the next step. I am asking whether the same rules apply to taluk boards.

Mr. SPEAKER.—The Hon'ble Member may please put a separate question.

Manure collected in the Municipal Area of Tumkur Town.

*Q.—547. Smt. G. C. BHAGEERATHAMMA (Tumkur).—

Will the Government be pleassed to state :—

(*a*) whether it has come to their notice that the health of the citizens of Tumkur is affected as the manure collected in the municipal area is being deposited in the heart of the town ;

(*b*) if so, the action taken by the Government ?

A.—Sri K. PUTTASWAMY (Minister for Municipal Administration).—

(*a*) No.

(*b*) Does not arise in view of the reply to clause (*a*).

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಬರವಣಿಗೆಯ ಮೂಲಕ ಮಾತ್ರವಲ್ಲ ಮೊಖ್ತಾ ಮಂತ್ರಿಗಳನ್ನು ಕಂಡು ಹೇಳುವುದರ ಮೂಲಕ ತಿಳಿಸಿದ್ದರೂ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಯಾವ ರೀತಿ ಸರ್ಕಾರದ ಗಮನಕ್ಕೆ ತರಬೇಕೆಂಬುದನ್ನು ಹೇಳುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಯಲ್ಲ ಎರಡು ಭಾಗವಿದೆ. ಆದ್ದರಿಂದ ಆ ತರಹ ಉತ್ತರವನ್ನು ಕೊಟ್ಟಿದೆ. ಊರಿನ ಮಧ್ಯೆ ಇದೆ ಎಂದು ಹೇಳುತ್ತಾರೆ. ಅದು ಊರಿನ ಮಧ್ಯೆ ಇಲ್ಲ. ಊರಿನ ಪಕ್ಕದಲ್ಲಿದೆ ಎಂದು ಬರೆದಿದ್ದಾರೆ. ಎರಡನೆಯದು ಆರೋಗ್ಯಕ್ಕೆ ಧಕ್ಕೆ ತಂದಿದೆ ಎಂದು ಹೇಳುತ್ತಾರೆ. ಆರೋಗ್ಯಕ್ಕೆ ಧಕ್ಕೆ ತಂದಿಲ್ಲ. ಮುನಿಸಿಪಾಲಿಟಿಯವರು ಊರಿನ ಪೂರ್ವ ಭಾಗದಲ್ಲಿದೆ, ಅದನ್ನು ಬೇರೆ ಕಡೆಗೆ ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಸರಿಯಾದ ಮತ್ತು ಸೂಕ್ತವಾದ ಜಾಗ ದೊರೆತಿಲ್ಲ. ಜಾಗ ದೊರೆತ ಕೂಡಲೇ ಬದಲಾಯಿಸುತ್ತೇವೆಂದು ಬರೆದಿದ್ದಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು, ತಿಪ್ಪೆಗುಂಡಿ ಅಲ್ಲಿರುವುದರಿಂದ ಆರೋಗ್ಯಕ್ಕೆ ಧಕ್ಕೆ ಬರುತ್ತದೆ ಎಂದು ಬರೆದು ಕಳಿಸಿಲ್ಲವೇ ಸ್ವಾಮಿ ? ಅದನ್ನು ಎಷ್ಟು ಕಾಲದೊಳಗೆ ಬದಲಾಯಿಸುತ್ತಾರೆ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಬರೆದಿರುವ ವಿಚಾರ ನನಗೆ ತಿಳಿಯದು. ಅದನ್ನು ಬದಲಾಯಿಸಬೇಕೆಂದು ಶ್ಯಾಮ್ಲೀಯ ಸಂಸ್ಥೆಯವರು ಇದ್ದಾರೆ. ನಾವು ಹುಡುಕುತ್ತಿದ್ದೇವೆ, ಆದಷ್ಟು ಜಾಗ್ರತೆ ಬದಲಾಯಿಸುತ್ತೇವೆಂದು ಬರೆದಿದ್ದಾರೆ. ಆದುದರಿಂದ ಜಾಗ ಸಿಕ್ಕಿದ ಕೂಡಲೇ ಬದಲಾಯಿಸುತ್ತಾರೆ. ಯಾವಾದರೂ ನಾಗರಿಕರು ಸೂಕ್ತವಾದ ಜಾಗವನ್ನು ಆದಷ್ಟು ಜಾಗ್ರತೆ ಒದಗಿಸಿಕೊಟ್ಟರೆ ಬದಲಾಯಿಸುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಯಾವಾಗ ಬದಲಾಯಿಸಬಹುದು ಎನ್ನುವುದಕ್ಕೆ ಸರ್ಕಾರದವರು ಭರವಸೆ ಕೊಡುವುದಕ್ಕಾಗುವುದಿಲ್ಲ.